ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ನಿರ್ಣಯವು ಈ ಸಭೆಯಲ್ಲಿ ಅಂಗೀಕಾರವಾಗಿದೆ. ಮೊನ್ನೆ ನಾನು ತಿಳಿಸಿದ ಹಾಗೆ ಅದನ್ನು ಯಾವ ರೀತಿ ಕಾರ್ಯಗತ ಮಾಡಬೇಕೆಂಬ ಬಗ್ಗೆ ನಲಹೆ ಕೊಡಬೇಕೆಂದು ಪಬ್ಲಿಕ್ ಸರ್ವಿಸ್ ಕಮೀಷನವರನ್ನು ಕೇಳಿದ್ದೇವೆ.

ಶ್ರೀ ಎಂ. ಮಾದಯ್ಯ.—ಈ ವಿಷಯದಲ್ಲಿ ರೂಲ್ಸ್ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಂದ ನಲಹೆ ಬಂದಮೇಲೆ ಮಾಡುತ್ತೇವೆ.

ಶ್ರೀ ಎಂ. ಮಾದಯ್ಯ.—ಜಾಗ್ರತೆ ಅವರಿಂದ ನಲಹೆ ತರಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದಷ್ಟು ಜಾಗ್ರತ ಮಾಡುತ್ತೇವೆ.

Kasaba Hobli of Hosadurga Taluk (Bifurcation into Kasaba and Bagur)

Q.—393. Sri G. BASAPPA (Hosadurga).—

Will the Government be pleased to state:—

(*a*) the number of villages in Kasaba Hobli of Hosadurga Taluk;

(*b*) whether there are any representations from the public for the bifurcation of Kasba Hobli into Kasba and Bagur;

(*c*) since how long these petitions are pending with the Government and the action taken in the matter ?

A.—Sri Kadidal MANJAPPA (Minister for Revenue and Public Works).—

(*a*) 85 villages.

(*b*) Yes. Representations have been received from Seva Sangha, Bagur.

(*c*) Not pending with Government but pending since March 1953 in the District Office for examination.

ಶ್ರೀ ಜಿ. ಬಸಪ್ಪ.—ಒಬ್ಬ ರೆವೆನ್ಯೂ ಇನ್‌ಸ್ಪೆಕ್ಟರು 85 ಹಳ್ಳಿಗಳನ್ನು ಒಮ್ಮೆಯಾದರೂ ವಿಸಿಟ್ ಮಾಡ ಬೇಕಾದರೆ ಎಷ್ಟು ದಿವಸವಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅವನ ದೇಹ ದಾರ್ಢ್ಯ, ಆ 85 ಹಳ್ಳಿಗಳ ವಿಸ್ತೀರ್ಣ ಮುಂತಾದು ವುಗಳನ್ನವಲಂಬಿಸಿದೆ; ಅದನ್ನು ನಾನು ನಿರ್ಧರವಾಗಿ ಹೇಳಲಾರೆ.

ಶ್ರೀ ಜಿ. ಬಸಪ್ಪ.—ಒಬ್ಬ ರೆವೆನ್ಯೂ ಇನ್‌ಸ್ಪೆಕ್ಟರು 85 ಹಳ್ಳಿಗಳನ್ನು ನೋಡಿ ಅಲ್ಲಿಯ ರೈತರ ಕಷ್ಟ ಸುಖ ಗಳನ್ನು ನೋಡಿಕೊಳ್ಳುವುದು ಬಹಳ ಕಷ್ಟವೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಇದು ಪ್ರಶ್ನೆಯ ರೂಪದಲ್ಲಿ ಬಂದದ್ದರಿಂದ ನನ್ನ ಗಮನಕ್ಕೆ ಬಂದಿದೆ; ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ಬಸಪ್ಪ.—Bifurcation ಮಾಡಲು administrative difficulty ಏನಾದರೂ ಇದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಹೋಬಳಿಯ ಹಳ್ಳಿಯನ್ನು ಇನ್ನೊಂದಕ್ಕೆ ಸೇರಿಸುವುದಕ್ಕೆ ಕಷ್ಟ ವಿರುತ್ತದೆ. ರಿಕಾರ್ಡುಗಳನ್ನೆಲ್ಲಾ ಹಂಚಬೇಕಾಗು ತ್ತದೆ. ಇದರಿಂದ ಈ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಜಿ. ಬಸಪ್ಪ.—ಹಿಂದೆ ಕೂಡ ಇದನ್ನು ಮಾಡ ಬೇಕೆಂದು ಮನವಿಮಾಡಿಕೊಂಡಿರಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆಮಾಡು ತ್ತೇವೆಂದು ಹೇಳಿದ್ದೇನೆ.

Tank Project in Manchaldore Forest Area.

Q.—462. Sri B. C. NANJUNDAIYA (Kora).—

Will the Government be pleased to state:—

(*a*) whether there is a proposal to build a tank in Manchaldore Forest area in Kagalvadi Hobli, Gubbi Taluk, Tumkur District;

(*b*) the number of estimates, if any, with details in this respect;

(*c*) the duration of time taken to prepare these estimates;

(*d*) whether it is not a fact that an observation is made by Sri Ramamurthy Committee about the necessity of having a Project in this area;

(*e*) whether the estimate or estimates are prepared as per the Committee's observation ?

A.—Sri Kadidal MANJAPPA (Minister for Revenue and Public Works).—

(*a*) Yes, in respect of 3 tanks.

(*b*) Three.

(i) Tank across Mattadahalla near Matta is estimated to cost Rs. 1.45 lakhs to irrigate 168 acres.

(ii) Tank across Hirehalla is estimated to cost Rs. 2·00 lakhs to irrigate 120 acres.

(iii) Tank near Yerabahalli is estimated to cost 4·50 lakhs to irrigate 480 acres. An alternative estimate at a lower site for the same work is also got up for Rs. 6·20 lakhs to irrigate 480 acres.

(*c*) About 4 months.

(*d*) No.

(*e*) Does not arise in view of reply to (*d*).

ಶ್ರೀ ಬಿ. ಸಿ. ನಂಜುಂಡಯ್ಯ.—(ಡಿ) ಭಾಗಕ್ಕೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ, ರಾಮಮೂರ್ತಿ ಕಮಿಟಿಯವರು ಆ ಪ್ರದೇಶದಲ್ಲಿ ಸಂಚಾರ ಮಾಡಿದ್ದು ತಮಗೆ ಗೊತ್ತಿದೆಯೆ ?